# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಪಿಪಿಪಿ ಯೋಜನೆಗಳಿಗೆ ವಿವಿಧ ಇಲಾಖೆಗಳು ತಯಾರಿಸುವ ಪ್ರಾಥಮಿಕ ಅಧ್ಯಯನ ವರದಿಗಳನ್ನು ತಯಾರಿಸಲು Empanelled Transaction Advisor ಸೇವೆಯನ್ನು ಪಡೆಯಲು ತಗಲುವ ವೆಚ್ಚಕ್ಕೆ ಅನುದಾನ ಸೌಲಭ್ಯ ಒದಗಿಸಲು ಕೆ.ಎಸ್.ಐ.ಐ.ಡಿ.ಸಿ ಸಂಸ್ಥೆಯ ಕೆಐಪಿಡಿಎಫ್ ಖಾತೆಯಲ್ಲಿ ಅನುದಾನ ಇರಿಸುವ ಕುರಿತು.

ಓದಲಾಗಿದೆ:

1. ಕೇಂದ್ರ ಸರ್ಕಾರದ ಅಧಿಸೂಚನೆ ಸಂಖ್ಯೆ: F-10/03/2018-PPP ದಿ:07.12.2020.
2. ಯೋಜನಾ ಇಲಾಖೆಯ ಹಿಂಬರಹ ಸಂಖ್ಯೆ: PSD/9/PFR/2021 ದಿ: 24.03.2021.
3. ಈ ಕಛೇರಿ ಅ.ಟಿ. ಸಂಖ್ಯೆ: ಐಡಿಡಿ 127 ಐಟಿಎಸ್ 2020 ದಿ:22.04.2021.
4. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: FD 203 EXP-1/20 ದಿ: 10.06.2021.
5. 2021-22ನೇ ಸಾಲಿನ ಪೂರಕ ಅಂದಾಜುಗಳು ಮೊದಲನೆ ಕಂತು ಆರ್ಥಿಕ ಇಲಾಖೆಯ ಅನುಮತಿ ಪತ್ರ ಸಂಖ್ಯೆ: ಆಇ 02 ಬಿಎಸ್‌ಜಿ 2021 ದಿ:12.10.2021.
6. ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ: FD 203 EXP-1/2021 ದಿ:09.03.2022.

ಪ್ರಸ್ತಾವನೆ:

ಮೇಲೆ ಓದಲಾದ (1)ರ ಆದೇಶದಲ್ಲಿ ಭಾರತ ಸರ್ಕಾರವು ಸಾಂಕ್ರಾಮಿಕ ಪರಿಸ್ಥಿತಿ 2020 ರ ಸಮಯದಲ್ಲಿ, ಆತ್ಮನಿರ್ಭರ್ ಯೋಜನೆಯಡಿ ಸಾಮಾಜಿಕ ವಲಯದ ಮೂಲಸೌಕರ್ಯಗಳ ಬಗ್ಗೆ ವಿಶೇಷ ಕಾಳಜಿಯೊಂದಿಗೆ ಮೂಲಸೌಕರ್ಯಗಳ ಅಭಿವೃದ್ಧಿಗೆ ಒತ್ತು ನೀಡಿ, ಈಗಾಗಲೇ ಅಸ್ತಿತ್ವದಲ್ಲಿರುವ ವಿ.ಜಿ.ಎಫ್ ಅನುದಾನವನ್ನು ಪರಿಷ್ಕರಿಸಲಾಯಿತು.

2. ಮೇಲೆ ಓದಲಾದ (2)ರ ಹಿಂಬರಹದಲ್ಲಿ ಅಪರ ಮುಖ್ಯ ಕಾರ್ಯದರ್ಶಿಗಳು, ಯೋಜನಾ ಇಲಾಖೆ ರವರು ಕರಡು ಪರಿಷ್ಕೃತ ವೈಯಾಬಿಲಿಟಿ ಗ್ಯಾಪ್ ಫಂಡ್ ಮಾರ್ಗಸೂಚಿಗೆ ತಮ್ಮ ಒಪ್ಪಿಗೆಯನ್ನು ಸೂಚಿಸುತ್ತಾ "Finance department should deposit funds with IDD to prepare RFDs/DPRs/Pre-Feasible Reports/Feasible Reports etc., for all the departments by IDD only." ಎಂದು ತಿಳಿಸಿರುತ್ತಾರೆ.

3. ಮೇಲೆ ಓದಲಾದ (3)ರ ಅ.ಟಿ.ಯಲ್ಲಿ ವಿವಿಧ ಆಡಳಿತ ಇಲಾಖೆಗಳು ಅನುಷ್ಠಾನಗೊಳಿಸುವ ಪಿಪಿಪಿ ಯೋಜನೆಗಳಿಗೆ ಅಗತ್ಯವಿರುವ ಪ್ರಾಥಮಿಕ ಅಧ್ಯಯನ ವರದಿಗಳನ್ನು ತಯಾರಿಸಲು Empanelled Transaction Advisor ಸೇವೆಯನ್ನು ಪಡೆಯಲು ತಗಲುವ ವೆಚ್ಚವನ್ನು ಭರಿಸಲು ರೂ.20.00 ಕೋಟಿ ಹೆಚ್ಚುವರಿ ಅನುದಾನ ಒದಗಿಸಲು ಆರ್ಥಿಕ ಇಲಾಖೆಗೆ ಕೋರಲಾಗಿತ್ತು.

4. ಮೇಲೆ ಓದಲಾದ (4)ರ ಆರ್ಥಿಕ ಇಲಾಖೆಯ ಹಿಂಬರಹದಲ್ಲಿ ರೂ.20.00 ಕೋಟಿ ಹೆಚ್ಚುವರಿ ಅನುದಾನಕ್ಕೆ ಪೂರಕ ಅಂದಾಜು-1 ರಲ್ಲಿ ಅನುಮೋದನೆ ಪಡೆದು ನೀಡಲಾಗುವುದು ಎಂದು ಆರ್ಥಿಕ ಇಲಾಖೆಯು ತಿಳಿಸಿರುತ್ತದೆ.

5. ಮೇಲೆ ಓದಲಾದ (5)ರ ಆರ್ಥಿಕ ಇಲಾಖೆಯ ಪತ್ರದಲ್ಲಿ ಪೂರಕ ಅಂದಾಜು-1 ರಲ್ಲಿ ಅನುಮೋದನೆಯಾದ ರೂ.20.00 ಕೋಟಿ ಅನುದಾನವನ್ನು ವೆಚ್ಚ ಮಾಡಲು ಅನುಮತಿ ನೀಡಿತು.

6. ಆದರೆ, ಆರ್ಥಿಕ ಇಲಾಖೆಯನ್ನು ಸದರಿ ಅನುದಾನವನ್ನು ಬಳಸಿಕೊಳ್ಳಲು ಸಹಮತಿಯನ್ನು ಕೋರಿದಾಗ ಮೇಲೆ ಓದಲಾದ (6)ರ ಹಿಂಬರಹದಲ್ಲಿ ರೂ.2.00 ಕೋಟಿಯನ್ನು ಮಾತ್ರ ವೆಚ್ಚ ಮಾಡಲು ಅನುಮತಿ ನೀಡಿ, ಸದರಿ ಅನುದಾನವನ್ನು ಈ ಇಲಾಖೆಯ ನೋಡಲ್ ಏಜೆನ್ಸಿಯಾದ KSIIDCಯಲ್ಲಿ ಇರಿಸಲು ಅನುಮತಿ ನೀಡಿದೆ.

7. ಅದರಂತೆ, ಈ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಐಡಿಡಿ 127 ಐಟಿಎಸ್ 2020,**
**ಬೆಂಗಳೂರು, ದಿನಾಂಕ: 21.03.2022**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳಡಿ, ವಿವಿಧ ಆಡಳಿತ ಇಲಾಖೆಗಳು ಅನುಷ್ಠಾನಗೊಳಿಸುವ ಪಿಪಿಪಿ ಯೋಜನೆಗಳಿಗೆ ಅಗತ್ಯವಿರುವ ಪ್ರಾಥಮಿಕ ಅಧ್ಯಯನ ವರದಿಗಳನ್ನು ತಯಾರಿಸಲು Empanelled Transaction Advisor ಸೇವೆಯನ್ನು ಪಡೆಯಲು ತಗಲುವ ವೆಚ್ಚವನ್ನು ಭರಿಸಲು ಕೆ.ಎಸ್.ಐ.ಐ.ಡಿ.ಸಿ, ಬೆಂಗಳೂರು ಇವರಲ್ಲಿ ಲಭ್ಯವಿರುವ ಕೆಐಪಿಡಿಎಫ್ ಖಾತೆ 510131000000417, Union Bank of India, IFSC Code: UBIN0930911 ಗೆ ರೂ.2,00,00,000/- (ರೂ. ಎರಡು ಕೋಟಿ ಮಾತ್ರ) ಗಳನ್ನು ಬಿಡುಗಡೆ ಮಾಡಲಾಗಿದೆ. ಈ ಮೊತ್ತವನ್ನು ಲೆಕ್ಕ ಶೀರ್ಷಿಕೆ 3451-00-090-1-06-059-PPP Development Activities-Other Expenses ಯ 2021-22ರ ಅನುದಾನದಡಿಯಲ್ಲಿ ಭರಿಸತಕ್ಕದು.

ಈ ಕೆಳಕಂಡ ನಿಯಮ ಮತ್ತು ಷರತ್ತುಗಳನ್ನು ಪಾಲಿಸತಕ್ಕದ್ದು:

1. ಸದರಿ ಮೊತ್ತವನ್ನು ಮುಖ್ಯ ಹಣಕಾಸು ಹಾಗೂ ಲೆಕ್ಕ ಅಧಿಕಾರಿಗಳು, ಕೆ.ಎಸ್.ಐ.ಐ.ಡಿ.ಸಿ, ಬೆಂಗಳೂರು ಇವರು ಹಣ ಸ್ವೀಕೃತಿ ರಸೀದಿಯ ಮೂಲಕ ಸರ್ಕಾರದ ಅಧೀನ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ಇವರ ಮೇಲು ರುಜುವಿನೊಂದಿಗೆ ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇವರಿಂದ ಪಡೆಯಲು ಅನುಮತಿ ನೀಡಲಾಗಿದೆ.

2. ಸದರಿ ಮೊತ್ತವನ್ನು ವಿವಿಧ ಆಡಳಿತ ಇಲಾಖೆಗಳು ಅನುಷ್ಠಾನಗೊಳಿಸುವ ಪಿಪಿಪಿ ಯೋಜನೆಗಳಿಗೆ ಅಗತ್ಯವಿರುವ ಪ್ರಾಥಮಿಕ ಅಧ್ಯಯನ ವರದಿಗಳನ್ನು ತಯಾರಿಸಲು Empanelled Transaction Advisor ಸೇವೆಯನ್ನು ಪಡೆಯಲು ತಗಲುವ ವೆಚ್ಚವನ್ನು ಭರಿಸಲು ಕೆಐಪಿಡಿಎಫ್ ಮಾರ್ಗಸೂಚಿಯನ್ನು ಅನುಸರಿಸಿ ಹಣ ಬಿಡುಗಡೆ ಮಾಡತಕ್ಕದ್ದು.

3. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ರವರ ಶಿಫಾರಸ್ಸಿನ ಮೇರೆಗೆ ವಿವಿಧ ಆಡಳಿತ ಇಲಾಖೆಗಳಿಗೆ ಹಣ ಬಿಡುಗಡೆ ಮಾಡತಕ್ಕದ್ದು.

4. ಹಣ ಬಳಕೆಯಾದ ನಂತರ ಬಳಕೆ ಪ್ರಮಾಣ ಪತ್ರವನ್ನು ಸಲ್ಲಿಸುವುದು.

5. ಈ ಆದೇಶವನ್ನು ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ. ಆಇ 02 ಬಿಎಸ್‌ಜಿ 2021 ದಿ:12.10.2021 ರನ್ವಯ ಇಲಾಖಾ ಪ್ರಧಾನ ಕಾರ್ಯದರ್ಶಿಗಳಿಗೆ ಪ್ರತ್ಯಾಯೋಜಿಸಿರುವ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಕಲಾವತಿ ಎಸ್.ಎನ್.)
ಸರ್ಕಾರದ ಅಧೀನ ಕಾರ್ಯದರ್ಶಿ-1,
ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು
ಒಳನಾಡು ಜಲಸಾರಿಗೆ ಇಲಾಖೆ.

ಗೆ,

1. ಪ್ರಧಾನ ಮಹಾಲೇಖಪಾಲರು (ಜಿ & ಎಸ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
2. ಪ್ರಧಾನ ಮಹಾಲೇಖಪಾಲರು (ಇ & ಆರ್ ಎಸ್ ಎ), ಕರ್ನಾಟಕ, ಹೊಸ ಕಟ್ಟಡ, "ಆಡಿಟ್ ಭವನ", ಅಂಚೆ ಪೆಟ್ಟಿಗೆ ಸಂಖ್ಯೆ: 5398, ಬೆಂಗಳೂರು-560001.
3. ಪ್ರಧಾನ ಮಹಾಲೇಖಪಾಲರು (ಆ & ಇ), ಕರ್ನಾಟಕ, ಪಾರ್ಕ್ ಹೌಸ್ ರಸ್ತೆ, ಅಂಚೆ ಪೆಟ್ಟಿಗೆ ಸಂಖ್ಯೆ: 5329, ಬೆಂಗಳೂರು-560001.
4. ವ್ಯವಸ್ಥಾಪಕ ನಿರ್ದೇಶಕರು, ಕೆ.ಎಸ್.ಐ.ಐ.ಡಿ.ಸಿ, ಖನಿಜ ಭವನ, ಬೆಂಗಳೂರು
5. ಜಂಟಿ ನಿರ್ದೇಶಕರು, (ಪಿಎಮ್ & ಐ ವಿಭಾಗ), ಯೋಜನಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
6. ಯೋಜನಾ ನಿರ್ದೇಶಕರು, ಖಜಾನೆ-2, ಖನಿಜ ಭವನ, ಬೆಂಗಳೂರು.
7. ಜಂಟಿ ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ನೃಪತುಂಗ ರಸ್ತೆ, ಬೆಂಗಳೂರು.
8. ಉಪ ನಿರ್ದೇಶಕರು, ಟಿ.ಎನ್.ಎಮ್.ಸಿ, ಖನಿಜ ಭವನ, ಬೆಂಗಳೂರು.
9. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ, (ವೆಚ್ಚ-1), ವಿಧಾನಸೌಧ, ಬೆಂಗಳೂರು.

ಪ್ರತಿಯನ್ನು:

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
2. ಸರ್ಕಾರದ ಜಂಟಿ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
3. ಸರ್ಕಾರದ ಅಧೀನ ಕಾರ್ಯದರ್ಶಿ-1, ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ವಿಕಾಸ ಸೌಧ, ಬೆಂಗಳೂರು.
4. ಶಾಖಾ ರಕ್ಷಾ ಕಡತ